ಮೈಸೂರ ಗೆಜೆಟ.

ಸಂ. XXXVIII] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ 9.

ಬೆಂಗಳೂರು, ಗುರುವಾರ, ಮಾರ್ಚ್ ತಾ|| 5, ಸ್ 1903.

IIನೇ ಭಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಯೆರೇರಿಂದ ಕೊಡೋಪಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ತಾರೀಖು 5ನೇ ಫೆಬ್ರವರಿ 1903, ಮೊಕ್ಕಾಂ ಮುಗವಾಳ.

ದೊಡ್ಡಬಳ್ಳಾಪುರದ ತಾ|| ರಾಜಗಟ್ಟದ ಹೋಬಳಿ ಗೂಳ್ಯ-ನಂದಿಗುಂದ ದೇವನಹಳ್ಳಿ ತಾ|| ಆವತಿ ಹೋ|| ಕಾರಹಳ್ಳಿ ಈ ಗ್ರಾಮಗಳ ಜಮೀನುಗಳು ಸ್ಟೇಟ್ ಫಾರೆಸ್ಟ್‌ಗೆ ದಾಖಲ್ ಮಾಡಿಕೊಳ್ಳತಕ್ಕ ಖಾಜಿ ಫಾರೆಸ್ಟ್ ಇಲಾಖೆ ಮೋರಫತ್ತು ಇಸ್ತಿಹಾರ್ ಗೆಜೆಟಿನಲ್ಲಿ ಪ್ರಾಯಿಷ್‌ಗಾಗಿ ಇದರ ವೆವಸ್ಥೆಬಗ್ಯೆ ನಮ್ಮನ್ನು ನೇಮಕ ಮಾಡಿರುವಂತೆ 1902ನೇ ಇಸವಿ ಅಕ್ಟೋಬರ್ 3ನೇ ಮಕ್ತುಂ 245–1740ನೇ ನಂಬರು ನೋಟಿಫಿಕೇರ್ಷ ಅನುಸರಿಸಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಗೂಳ್ಯ–ನಂದಿಗುಂದ ಗ್ರಾಮದ ಸರ್ವೆ 24—25, ಕಾರಹಳ್ಳಿ ಗ್ರಾಮದ ಸರ್ವೆ 199 ಈ ನಂಬರುಗಳು ಹಾಲಿ ಜಾರೀಲಿ ಇರುವ ದಿಬ್ಬಗಿರಿ ಬೆಟ್ಟದ ಸ್ಟೇಟ್ ಫಾರೆಸ್ಟ್‌ಗೆ ಸೇರಿಸಿಕೊಳ್ಳುವದು ಅವಶ್ಯಕ ಇರುವದ್ದರಿಂದ ಫಾರೆಸ್ಟ್ ರೆಗ್ಯುಲೇರ್ಷ 5ನೇ ಸೆಕ್ಷರ್ ಅನುಸರಿಸಿ ಈ ಜಮೀನುಗಳ ಯಾವ ಹಕ್ಕು ದಾರಿಯನ್ನಾದರೂ ನಮೂದಿಸುವ ಅಥವಾ ದಾವೆಯನ್ನಾದರು ಮಾಡುವ ಪ್ರತಿ ಮನುಷ್ಯನಿಗೂ ಅಂಥಾ ಹಕ್ಕು ದಾರು ಅಥವಾ ದಾವೆಯ ಸ್ವಭಾವವನ್ನು ವಿವರಿಸಿ ಇರುವ ಬಂದು ಬರಹ ಮೂಲಕವಾದ ನೋಟಿಸನ್ನು ಇಸ್ತಿಹಾರು ಗೆಜೆಟಿನಲ್ಲಿ ಪ್ರಾಯಿಷ್‌ದ ತಾರೀಖು ಲಾಗಾಯತು 3 ತಿಂಗಳು 15 ದಿವಸಗಳ ವಳಗಾಗಿ ನಮ್ಮಲ್ಲಿ ಹಾಜರ್‌ಮಾಡಬೇಕು ಅಥವಾ ಆ ವಾಯಿದೆ ಅಂದರು ವಾರು ನಮ್ಮ ರೂಬರೂಬ್ ಹಾಜರಾಗಿ ಬರ್ಯಾ ಮಾಡಬೇಕು.

ಸ್ಟೇಟ್ ಫಾರೆಸ್ಟ್‌ಗೆ ಸೇರೋಣದ್ದರಿಂದ ಉತ್ತರೋತ್ತರ ಜಮೀನುಗಳಲ್ಲಿ ಜನ ಮತ್ತು ದನಕರುಗಳು ಪ್ರವೇಶ ಮಾಡಲು ನಿ[illegible] ಧವುಂಟಾಗುವದಲ್ಲದೆ ಎಲ್ಲಾ ಹಕ್ಕು ನಿವರ್ತಿಯಾಗುವದು. ಆದಕಾರಣ ವಾಯಿದೆ ಕಳದುಬರುವ ತಕರಾರುಗಳನ್ನು ಆ[illegible] ಡುವದಿಲ್ಲಾ ತಿಳಿಯುವದು.

ಮತ್ತು ಫಾರೆಸ್ಟ್ ರೆಗ್ಯುಲೇರ್ಷ 6ನೇ ಸೆಕ್ಷರ್ ಅನುಸರಿಸಿ ತಿಳಿಯಪಡಿಸುವದೇನಂದರೆ—

ಸ್ಟೇಟ್ ಫಾರೆಸ್ಟ್ ಆಗಿರಬೇಕೆಂದು ಮೊಕರರ್ಮಾಡುವ ಇಸ್ತಿಹಾರ್‌ನಿಂದ ಗೊತ್ತಾಗುವ ತಾರೀಖಿಗೂ ಈ [illegible] ಆಗುವದಕ್ಕೂ ಮಧ್ಯಕಾಲದಲ್ಲಿ ಈ ಜಮೀನು ಅಥವಾ ಅದರ ಮೇಲೆ ಯಾವ ಹಕ್ಕನ್ನಾಗಲಿ ಸರಕಾರದ ಅಪ್ಪಣೆ[illegible] ಸಕೂಡದು ಮತ್ತು ಅಂಥಾ ಜಮೀನುಗಳಲ್ಲಿ ಹೊಸದಾಗಿ ಮನೆ ವಗ್ಯೆರೆ ಕಟ್ಟುಕೂಡದು ಎಂದು ಇದರಿಂದ ಎಲ್ಲರಿಗೂ[illegible]

ಡಿ. ಎಂ.[illegible]

ಫಾರೆಸ್ಟ್ ಸೆಟ್ಲಮೆಂಟ್ ಆಫೀಸರ್, ಬೆ[illegible]

ನೋಟಿಫಿಕೇಷನ್, ತಾರೀಖು 16ನೇ ಫೆಬ್ರವರಿ 1903ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೆ ತಿಳಿಯುವಡಿಸುವದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸುಪೇಟೆ ರೇಂಜಿಗೆ ಸೇರಿದ ಹರಿದಿಗೊಂದಿ ಮತ್ತು ಹುಲತಾರ ಸ್ಟೇಟ್ ಫಾರೆಸ್ಟುಗಳಲ್ಲಿ ಗುರ್ತು ಮಾಡಿರುವ ಈ ಕೆಳಗೆ ನಮೂದು ಆಗುವ ಕೂಪುಗಳಲ್ಲಿ ಸೌದೆಯನ್ನು ಈ ಕೆಳಗಣ ಷರತ್ತುಗಳಿಗೆ ವಳಪಟ್ಟು ಕಡದು ಸಾಗಿಸಿಕೊಳ್ಳುವ ಹಕ್ಕುದಾರಿಯು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಅಥವಾ ರೇಂಜ್ ಫಾರೆಸ್ಟ್ ಆಫಿಸರವರಿಂದ 1903ನೇ ಇಸವಿ ಮಾರ್ಚಿ 7ನೇ ತಾರೀಖು ದಿವಸ ಬಿಡ್ಡಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುವದು.

ಫಾರೆಸ್ಟ್ ಹೆಸರು.	ಕೂಪಿನ ನಂಬರುಗಳ ಸರಣಿ	ಕೂಪಿನ ನಂಬರುಗಳ ಸಂಖ್ಯೆ.	ಸುಮಾರು ವಿಸ್ತೀರ್ಣ ಎಕರೆ.	ಕಡಿಯತಕ್ಕ ಮರಗಳ ಜಾತಿ.	ಬಂದು ಎಕರೆಗೆ ಸುಮಾರು ಸಿಕ್ಕಬಹುದಾದ ವೊತ್ತ.	ರೈಲ್ವೆ ಸ್ಟೇಷನ್‌ಗೆ ಫಾಸಲೆ.	ಷರಾ.
ಹಂದಿಗೊಂದಿ ಸ್ಟೇಟ್ ಫಾರೆಸ್ಟ್	I	1	130	ಚೆಜ್ಜಲು, ಹುಲವೆ, ಈಜಿ, ಪಜಾರಿ, ಹೆಸರೆ, ಹುರಗಲು, ಕಗ್ಗಲಿ, ದೇವದಾರು, ತೂಪರೆ, ಚನ್ನಂಗಿ, ಗೊರವಿ, ನೌಲಾಜಿ, ದಿಂಡಿಗ, ಹಾಲೆ, ಆಲಜಗಳ ಗಂಟಿ, ಮೂಕರತಿ ವಗೈರ	ಎಕರೆ ಬಂದಕ್ಕೆ ಸುಮಾರು $1\frac{3}{4}$ ಟ್ನ	ಬಿಡದಿ ಸ್ಟೇಷನ್‌ಗೆ 3ರ ಲಾಗಾಯತು 4 ಮೈಲಿ ವರಿಗೆ	ಕೂಪಿನ ಎರಡು ಭಾಗದಲ್ಲೂ ವಿಧಾಯಕವಾದ ಪಾಕಾದ ಲೈನ್ ಇರುತ್ತೆ. ಬಾಕಿ ಎರಡು ಕಡೆ ನಾಲಾಗಳು ನೀರು ಹರಿಯುವ ಸ್ಥಳಗಳು ಚಕ್ಕುಬಂದಿಯಾಗಿದೆ. ಸಾಧಾರಣವಾಗಿ ಮಟ್ಟವಾದ ಫಾರೆಸ್ಟ್
ಡಿಟೋ	II	1	200	ಡಿಟೋ	ಡಿಟೋ $2\frac{1}{2}$ ಟ್ನ	ಬಿಡದಿ ಸ್ಟೇಷನ್‌ಗೆ 6ರ ಲಾ|| 7 ಮೈಲಿ ವರಿಗೆ ಫಾಸಲೆ	ಮೂರು ಕಡೆಯಲ್ಲಿಯೂ ಪಾಕಾದ ಲೈನು 4ನೇ ಕಡೆ ಭಂಡಿ ರಸ್ತೆ ಇರುವ ಬೆಟ್ಟದ ವಾರಡಿ. ಅರ್ಧ ಫಾರೆಸ್ಟ್ ಬೆಟ್ಟ ಕಾಡು, ಪಳೆದ ಬಾಕಿ ಅರ್ಧ ಮಟ್ಟ ಭೂಮಿಯಾಗಿದೆ
ಡಿಟೋ	III	1	80	ಡಿಟೋ	ಡಿಟೋ	ಡಿಟೋ	ಕೂಪು ಯಾವತ್ತೂ ಮಟ್ಟ ಭೂಮಿವುಳ್ಳ ಫಾರೆಸ್ಟ್
ಹುಲತಾರು ಸ್ಟೇಟ್ ಫಾರೆಸ್ಟ್	I	1	130	ಡಿಟೋ	ಎಕರೆ ಬಂದಕ್ಕೆ ಸುಮಾರು $1\frac{3}{4}$ ಟ್ನ	ಡಿಟೋ	ಕೂಪಿನ ಮೂರು ಭಾಗದಲ್ಲಿಯೂ ಡಿಮಾರ್ಕೇಷನ್ ಲೈನ್ ಇರುತ್ತೆ. ಮತ್ತೊಂದು ಕಡೆ ಬಂದು ನಾಲಾ ಮತ್ತು ಬಂದಾ ಫರಲಾಂಗು ವರಿಗೆ ಪಾಕಾದ ಲೈನ್. ಸುಮಾರಾಗಿ ಕೂಪು ಎಲ್ಲಾ ಬಟ್ಟ ಕಾಡಾಗಿದೆ
ಡಿಟೋ	II	1	140	ಡಿಟೋ	ಎಕರೆ ಬಂದಕ್ಕೆ ಸುಮಾರು 2 ಟ್ನಗಳು	2ರ ಲಾ|| 3 ಮೈಲಿ ಫಾಸಲೆ	ಕೂಪಿನ ಮೂರು ಕಡೆಯಲ್ಲೂ ಪಾಕಾದ ಲೈನ್ ಇರುತ್ತೆ. ಮತ್ತೊಂದು ಕಡೆ ಹುಲತಾರು ಗುಡ್ಡದ ಭಾಗ $\frac{2}{3}$ನೇ ಭಾಗ ಮಟ್ಟವಾಗಿದೆ. $\frac{1}{3}$ ಬೆಟ್ಟ ಕಾಡು

II. ಈ ಹರಾಜು ಫಾರೆಸ್ಟ್ ಕ್ಯಸರವೇಟರ್ ಸಾಹೇಬರವರ ಮಂಜೂರಾತೀಗೆ ವಳಪಟ್ಟು ಇರುತ್ತೆ.

ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವ ಕಾರಣವು ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಆಫಿಸರವರಿಗೆ ಅಧಿಕಾರವಿರುತ್ತೆ.

ಸವಾಲ್ದಾರನು ಸವಾಲ್ ಮಾಡುವದಕ್ಕೆ ಮುಂಚೆಯೆ 25 ರೂಪಾಯಿಗಳು ಡಿಪಾಜಿಟ್ಟು ಹಾಜರ್ಮಾಡಬೇಕು. ಮಂಜೂರಾದ ಸವಾಲ್ದಾರನ ಹೊರ್ತು ಹರಾಜು ಕ್ಕೈದಾದ ಮೇಲೆ ಇತರರದು ವಾಪಸು ಮಾಡಲ್ಪಡುವದು. ಆ ವೊ ಷರತ್ತು ಮೇರೆ ನಡಿಯಲು ಮಂಜೂರಾದ ಸವಾಲ್ದಾರನು ಇಡಬೇಕಾದ 25 ರೂಪಾಯಿ ಜುಮ್ಲಾ 50 ರೂಪಾ ಡೆಪಾಜಿಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಡುತ್ತೆ.

ಮಂಜೂರಾದ ಸವಾಲುದಾರನು ಪ್ರತಿ ಸೌದೆ ವೊತ್ತ ಅಳತೆಯಾದಹಾಗೆಲ್ಲಾ ಅಂಥಾ ಸೌದೆ ವೊತ್ತದ ಕಿಮ್ಮತನ್ನು ಪಾ ಮತ್ತು ಸರಿಯಾದ ಸ್ಟ್ಯಾಂಪು ಕಾಗದ್ದಲ್ಲಿ ಈ ಕೆಳಗಣ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊ ಕೂಪು ಯಾ ಕಂಪಾರ್ಟ್‌ಮೆಂಟನ್ನು ಪುನಹಾ ಹರಾಜು ಮಾಡಿಸಲಾದೀತು. ದುಸರಾ ಹರಾಜಿನಲ್ಲಿ ಏನಾದರೂ ಮೊದಲಿನ ಹರಾಜುದಾರನು ಭರ್ತಿಮಾಡಿ ಕೊಡಬೇಕು: ಆದರೆ ಹಾಯಿದೆ ಏನಾದರೂ ಬಂದರೆ ಅಂಥಾ ಹಾಯಿ ಆಗುವದಿಲ್ಲಾ.

ಪ ರ ತು ಗ ಳು .

1. ಸಂದಲ್, ಅಳಲೆ, ಹುಣಸೆ, ಜಾಲಾರಿ ಗಿಡಗಳು, ಎಕರೆ ಬಂದಕ್ಕೆ ಸರಾಸರಿ 40ರ ಕಿಂತ ಜಾಸ್ತಿ ಇಲ್ಲದೆ ಗುತ್ತು ಮಾಡಿರುವ ಮತ್ತು ಸೊಪ್ಪಿಗಳು ಅಂದರೆ ಸುತ್ತು ಅಳತೆ ಬಂದು ಅಡಿ ಬಳಗಿರುವ ಗಿಡಗಳು ಇವುಗಳನ್ನು ಬಿಟ್ಟು ಯಲ್ಲಾ ಗಿಡಗಳನ್ನು ಭೂಮಿ ಮಟ್ಟಕ್ಕೆ ಸರಿಯಾಗಿ ಕತರಾಯಿಸಬೇಕು.

2. ಸೌದೆಯನ್ನು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉರಪತಿ ಉಂಟು ದರೆ, ಕಂಟ್ರಾಕ್ಟದಾರನು ಡಿ॥ ಫಾರೆಸ್ಟ್ ಆಫಿಸರವರು ಗೊತ್ತು ಮಾಡುವ ಲುಕ್ಸಾನ್ ವೊಬಲಗನ್ನು ಸರಕಾರಕ್ಕೆ ಪಾವತಿ ಮಾಡಬೇಕು.

3. ತಂಗಡಿ ಮತ್ತು ಕಕ್ಕೆ ಇವುಗಳು ಈ ಹರಾಜಿನಲ್ಲಿ ಶೇರಿ ಇಲ್ಲ. ಅಲ್ಲದೆ ಫಲಗಳು ಬಿಡುವ ಅಂದರೆ ಬ್ಯಾಲ ವಗೈರೆ ಮತ್ತು ಪಸಾರೆ ಬಾಬುಗಳು ಅಂದರೆ ಹುಣಿಸೆ, ಅಳಲೆ ಇವೇ ಮೊದಲಾದ ಯಾವದೂ ಹರಾಜಿಗೆ ಶೇರಿ ಇಲ್ಲ ಉಳಿತು ಕೊಂಡಿರುವ ಸಂದಲ್ ಅಳಲೆ ಹುಣಸೆ ಗುರ್ತಿಗೋಸ್ಕರ ಬಿಟ್ಟಿರುವ ಮರಗಳ ವಿನಹಾ ಕಡಿಯಬಹುದಾದ ಇನ್ಯಾವ ಮರಗಳನ್ನು ಆದರೂ ಮನ್ನಾ ನೆಯಾಗಿ ಕಡದರೆ ಅಂಥಾದ್ದೆಲ್ಲಾ ಇಲಾಖಾ ಮೂರಿಫತ್ತು ಕಾಲ್ಸ್ ಮಾಡಿಸಿ ತಗಲುವ ಲಾಗವಡನ್ನು 50 ರೂಪಾಯಿನ ಸೆಕ್ಯೂರಿಟಿ ಹಣದಿಂದ ವಸೂಲ್ಮಾಡುತ್ತೆ.

4. ಸೌದೆ ಕತರಾವಣಿ ಮತ್ತು ಸಾಗಿಸತಕ್ಕದ್ದನ್ನೆಲ್ಲಾ 1903ನೇ ಇಸವಿ ಜುಲೈ ಆಖೈರುವಳಗಾಗಿ ಪೂರೈಸಿಕೊಳ್ಳಬೇಕು. ಹಾಗೆ ಮಾಡದೆ ಇದ್ದರೆ ಕಂಟ್ರಾಕ್ಟುದಾರನು ಪಾವತಿ ಮಾಡಿರುವ ವೊಬಲಗನ್ನು ಸರಕಾರಕ್ಕೆ ಸೇರಿಸಿಕೊಳ್ಳುವದಲ್ಲದೆ ಮೇಲ್ಕಂಡ ಸೌದೆ ಕತರಾವಣಿ ವ ಸಾಗಿಸತಕ್ಕ ಹಕ್ಕು ದಾರಿಯು ಸಹಾ ಆ ತಾರೀಖಿನಿಂದ ರದ್ದು ಆಗಿರುತ್ತೆ.

5. ಕಂಟ್ರಾಕ್ಟುದಾರ ಖಾಯಿಷ್ಮಾಡುವ ಸೌದೆ ವೊತ್ತಕ್ಕೆ ತೇದಾದು ಆದ ದರ ಗಾಡಿ ಬೋಜಾ ಬಂದಕ್ಕೆ 5½ ಸಲೆ ಅಡಿ ಅಥವಾ ಟರ್ ಬಂದಕ್ಕೆ 6ರ ಸಲೆ ಅಡಿ ಈ ಮೇರೆ ಹಾಸಲ್ ಯಾ ತೀರ್ವೆ ವೊಬಲಗು ಪಾವತಿ ಮಾಡಿದ ನಂತರ ರೇಂಜ್ ಫಾರೆಸ್ಟ್ ಆ ಫಿಸರವರು ಬಾಬು ರೂಢಿಸುವದಕ್ಕೆ ಲೈಸೆನ್ಸ್ ಕೊಡುತ್ತಾರೆ. ರೂಢಿಸಿದ ಬಾಬು ರಫ್ತು ಮಾಡಿಕೊಳ್ಳಲು ಸ್ಥಳದಲ್ಲಿರುವ ಫಾರೆಸ್ಟ್ ನೌಕರನು ರಹದಾರಿ ಕೊಡುತ್ತಾನೆ.

6. ಕೂಪ್ ಯಾ ಕಂಪಾರ್ಟುಮೆಂಟಿನಿಂದ ಸೌದೆಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತಮಯವಾದ ಮೇಲೆ ಸಾಗಿಸಕೂಡದು. ಕತರಾವಣಿ ಕೆಲಸಕ್ಕಾಗಿ ಕೊಟ್ಟು ಇರುವ ಕೂಪಿನಲ್ಲಿ ಆಗಲಿ ಅಥವಾ ಸೌದೆ ಗಾಡಿ ಮಾರ್ಗಗಳಲ್ಲಿ ಆಗಲಿ ಬೇಸಿಗೆ ಕಾಲದಲ್ಲಿ ಅಂದರೆ 1903ನೇ ಫಿಬ್ರವರಿ 1ರ ಲಾಗಾಯಿತು 1903ನೇ ಮೇ 31ರ ವರಿಗೆ ಏನಾದರೂ ಬೆಂಕಿ ಬಿದ್ದು ಅದು ಕಂಟ್ರಾಕ್ಟುದಾರನ ಅಥವಾ ಆತನ ಕಡೆ ಜನರು ಅಜಾಗ್ರತೆಯಿಂದ ವುಂಟಾದ್ದೆಂದು ಡಿ॥ ಫಾರೆಸ್ಟ್ ಆಫಿಸರವರಿಗೆ ಕಾಣಬಂದರೆ ಅದಕ್ಕೆ ಕಂಟ್ರಾಕ್ಟುದಾರನೇ ಜವಾಬ್ ಮಾಡಬೇಕು.

7. ಕಂಟ್ರಾಕ್ಟುದಾರನ ಕಡೆ ಗಾಡಿಯವರು ರೈಲ್ವೆ ಸ್ಟೇರ್ಷಗೆ ಬರುವಾಗ್ಯೆ ಸ್ಟೇಟು ಯಾ ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಹಿತಿ ಸೌದೆಯನ್ನು ಕಡಿದ್ದೇ ಆಗಲಿ ಅಥವಾ ಕಡದು ರಫ್ತು ಮಾಡುವದೇ ಆಗಲಿ ಕಂಡುಬಂದಲ್ಲಿ ಅಂಥಾವರನ್ನು ಫಾರೆಸ್ಟ್ ರೆಗ್ಯುಲೇರ್ಷ ಪ್ರಕಾರ ಪ್ರಾಸಿಕ್ಯೂರ್ಷಗೆ ಗುರಿಮಾಡಲ್ಪಡುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್ಸ.

ಕೋಲಾರ ಡಿಸ್ಟ್ರಿಕ್ಟು.

ಇಸ್ತಹಾರ್ನಾಮೆ, ತಾರೀಖು 12ನೇ ಫೆಬ್ರವರಿ 1903.

ಕೋಲಾರ ತಾಲ್ಲೂಕಿಗೆ ಶೇರಿದ ಜೋಡಿ ಜಂಬಾಪುರ ಮತ್ತು ಜೋಡಿ ಹಾವಳಿಗವ್ವಡನ ಹೊಸೂರು ಗ್ರಾಮಗಳು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಕೋಲಾರ ತಾಲ್ಲೂಕು ಆಮಿಲರವರ ಕಛೇರಿಯಲ್ಲಿ 1903ನೇ ಇಸವಿ ಏಪ್ರೆಲ್ 2ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1902ನೇ ಮಾರ್ಚಿಂ 7ನೇ ನಂಬರಿನ ಮೈಸೂರ ಗೆಜೆಟ್ಟಿನ 2ನೇ ಭಾಗದ 67ನೇ ನಂಬರ್ ಪೇಜು ನೋಡತಕ್ಕದ್ದು.

ಎಸ್. ಅಮೀರ್ ಹಸೇನ್,
ಆಕ್ಟಿಂಗ್ ಡೆಪ್ಯೂಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜ್ಸರವರ ಕೋರ್ಟಿನಲ್ಲಿ.

ಸ್ರ 1902—1903ನೇ ಇಸವಿ ಅರ್ಜೀ ನಂಬರ್ 216.

ಅರ್ಜೀದಾರ ನಂಜನಗೂಡು ತಾಲ್ಲೂಕು ಕಳಲೆ ಗ್ರಾಮದಲ್ಲಿರುವ ಮೃತಪಟ್ಟ ಗಿರಿಕಿಟ್ಟಿ ಮಗ ನಂಜಪ್ಪ, ಮೈನರ್ ಗಾರ್ಡಿಯ್ ಚಿಕ್ಕಪ್ಪ ಹೊನ್ನಪ್ಪ, ಮೈನರಾದ ಕಳಲೆ ಸ್ಥಳದ ಗಿರಿಕಿಟ್ಟಿ ಮಗ ನಂಜಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ನಂಜಪ್ಪನಿಗೆ ಚಿಕ್ಕಪ್ಪನು ಆಗಬೇಕೆಂಬ ಹಕ್ಕಿನ ಮೇಲೆ ಕಳಲೆ ಸ್ಥಳದ ಹೊನ್ನಪ್ಪನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ರ 1903ನೇ ಇಸವಿ ಮಾರ್ಚಿ ತಿಂಗಳು 20ನಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ರ 1903ನೇ ಇಸವಿ ಜನವರಿ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣ

ಸ್ರ 1902—1903ನೇ ಇಸವಿ ಅರ್ಜೀ ನಂಬರ್ 276.

ಅರ್ಜೀದಾರ ಹೈದರಾಬಾದ್ ಸಂಸ್ಥಾನದ ರಾಯಿಚೂರಿನಲ್ಲಿರುವ ಮಹಮದ್ ಫಕ್ರೂದ್ದೀ ಸಾಬರ ಮಗ ಗುಲ
ಮೈನರಾದ ಶ್ರೀರಂಗಪಟ್ಟಣದ ಸ್ಥಳದ ಹಬೀಬುಲ್ಲಾ ಸಾಹೇಬ್ ತಾಹಿರ್ ಮಗ ಜೈನುಲ್ಲಾಬ್ದೀರ ಆಸ್ತೀ ವಿಷ

ಸದರೀ ಮೈನರಾದ ಜೈನುಲ್ಲಾಬ್ದೀರಿಗೆ ಹಿತಚಿಂತಕನು ಆಗಬೇಕೆಂಬ ಹಕ್ಕಿನ ಮೇಲೆ ರಾಯಿಚೂರು
ಹದೀಸಾಬ್ ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ.
ರಿಂಗ್ ಬಗ್ಯೆ ಸ್ರ 1903ನೇ ಇಸವಿ ಮಾರ್ಚಿ ತಾರೀಖು 20ರಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನ

ಸ್ರ 1903ನೇ ಇಸವಿ ಫೆಬ್ರವರಿ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ವೊಹರ್ ನಮ್ಮ ದಸ್
ಣಾಗಿದೆ.

ಎಂ. ರಾ